ಪಾಲಿಟಿಕ್ಸ್ ಈಸ್ ದಿ ಲಾಸ್ಟ್ ರೆಸಾರ್ಟ್ ಫಾರ್ ದಿ ಸ್ಕೌಂಡ್ರಲ್ಸ್ ಅಂತ ಜಾರ್ಜ್ ಬರ್ನಾಡ್ ಷಾ ಹೇಳಿದ್ದರು'

'ರಾಜಕೀಯ ನೀಚರ ಅಂತಿಮ ಅಸ್ತ್ರ ಎಂದು ನಿಮ್ಮಂತಹವರು ನನ್ನನ್ನು ಟೀಕಿಸುತ್ತೀರಿ ಎಂದು ನನಗೆ ಮೊದಲೇ ಗೊತ್ತಿತ್ತು. ಅದಕ್ಕೆ ಸಾರ್, ನಾನು ರಾಜಕೀಯಕ್ಕೇನೂ ಇಳಿಯುತ್ತಿಲ್ಲ. ಅದರ ಬದಲು ಪ್ರಜಾಕೀಯಕ್ಕೆ ಧುಮುಕಿದ್ದೇನೆ !'

'ಐ ಲೈಕ್ ಇಟ್, ಐ ಲೈಕ್ ಇಟ್ ! ಕರ್ನಾಟಕ ರೆಸಾರ್ಟ್ ರಾಜಕೀಯಕ್ಕೆ ಕುಖ್ಯಾತಿ ಪಡೆದಿದೆ. ನೀವು ನೋಡಿದರೆ ಪಕ್ಷದ ಕಚೇರಿಯನ್ನೇ ರೆಸಾರ್ಟ್ ನಲ್ಲಿ ಮಾಡಿದ್ದೀರಲ್ಲ !'

'ಇದು ನನ್ನ ರೆಸಾರ್ಟ್. ಮುಂದೆ ನನ್ನ ಎಂ ಎಲ್ ಎಗಳನ್ನು ಕಟ್ಟಿ ಹಾಕುವುದಕ್ಕೆ ಯಾವುದೋ ರೆಸಾರ್ಟ್ ಹುಡುಕಿಕೊಂಡು ಹೋಗಬೇಕಾಗಿಲ್ಲ '

'ಒಂದು ರೂಪಾಯಿ ಖರ್ಚು ಮಾಡದೆ ಚುನಾವಣೆಯಲ್ಲಿ ಹೋರಾಡುತ್ತೇನೆ ಎಂದು ನೀವು ನಿಮ್ಮ ರುಪ್ಪೀಸ್ ರೆಸಾರ್ಟ್ ನಲ್ಲಿ ಕುಳಿತುಕೊಂಡು ಹೇಳುತ್ತೀರಲ್ಲ. ಸಾಧ್ಯವೇ?'

'ಹೂಂರೀ! ನಾನು ಒಂದು ರೂಪಾಯಿ ಬಿಚ್ಚಲ್ಲ. ಚಿತ್ರ ನಿರ್ಮಾಪಕರು ಕೊಟ್ಟ ರುಪೀಸ್ ನಿಂದಲೇ ಅಲ್ಲವೇ ನಾನು ಈ ಈ ರುಪ್ಪೀಸ್ ರೆಸಾರ್ಟ್ ಆರಂಭಿಸಿದ್ದು ?'

'ಪಕ್ಷದ ಚಿಹ್ನೆ ತುಂಬಾ ಡಿಫರೆಂಟಾಗಿರುತ್ತಲ್ಲಾ ?'

'ಓಂ ಚಿಹ್ನೆ ಚೆನ್ನಾಗಿರುತ್ತಲ್ವಾ?'

'ಬೇಡ ಉಪೇಂದ್ರರೇ. ಓಂ ಅಂದ ಕೂಡಲೇ ರೌಡಿಗಳ ನೆನಪಾಗುತ್ತೆ.'

'ಸೂಪರ್ ಚಿಹ್ನೆ'

'ಚೆನ್ನಾಗಿದೆ. ಆದರೆ ಆ ಚಿಹ್ನೆ ನೋಡಿದರೆ ಒಂದು ಕಡೆ ಮೂರು ಬೆರಳುಗಳಿವೆ. ಉಳಿದ ಎರಡು ಬೆರಳುಗಳು ಸೊನ್ನೆಯನ್ನು ಪ್ರತಿನಿಧಿಸುತ್ತದೆ. ಕಾಕತಾಳೀಯವೆಂಬಂತೆ ಮೂರೋ ಅಥವಾ ಯಾವುದೇ ಸೀಟು ಸಿಗದಿದ್ದರೆ ಮಾನ ಹರಾಜಾಗುತ್ತದಲ್ಲವೇ ಸಾರ್!'

'ಚಿಹ್ನೆ ಬಗ್ಗೆ ಆ ಮೇಲೆ ಯೋಚಿಸೋಣ ಬಿಡಿ ಸಾರ್'

'ರಾಜ್ಯದ ಪ್ರಮುಖ ಸಮಸ್ಯೆಯಾಗಿರುವ ಭ್ರಷ್ಟಾಚಾರವನ್ನು ನಿಗ್ರಹಿಸುವ ಬಗ್ಗೆಯಾದರೂ ಯೋಚಿಸಿದ್ದೀರಾ ?'

'ಹೌದು. ಭ್ರಷ್ಟಾಚಾರದ ವಿರುದ್ಧ ಹೋರಾಡುವ ಬಗ್ಗೆ ನಾನು ಈಗಾಗಲೇ ಚಿತ್ರರಂಗದ ಖ್ಯಾತ ಫೈಟ್ ಮಾಸ್ಟರ್ ಗಳೊಂದಿಗೆ ಚರ್ಚಿಸಿದ್ದೇನೆ. ಅವರನ್ನೆಲ್ಲಾ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಸೇರಿಸುತ್ತೇನೆ.'

'ಇಲ್ಲಿ ವರೆಗೆ ಯಾವುದೇ ಸಾಮಾಜಿಕ ಕ್ಷೇತ್ರಗಳಲ್ಲಿ ಕಾಣಿಸಿಕೊಳ್ಳದವರೆಂದು ನಿಮ್ಮನ್ನು ಪ್ರಜೆಗಳು ತಿರಸ್ಕರಿಸಿದರೆ ?'

'ಎಂಜಿಆರ್ ಅವರನ್ನು ಜನ ಮುಖ್ಯಮಂತ್ರಿ ಮಾಡಿದ್ದು ಸುಮ್ಮನೆ ಅಂದ್ಕೊಂಡ್ರಾ? ಅವರು ಬಹಳಷ್ಟು ಸಿನಿಮಾಗಳಲ್ಲಿ ನೊಂದವರ ಪರವಾಗಿ ನಿಲ್ಲುತ್ತಿದ್ದರು. ನಾನೇನು ಕಮ್ಮಿ ? ಚುನಾವಣಾ ಪ್ರಚಾರದಲ್ಲಿ ಅಂತಹ ಕ್ಲಿಪ್ಪಿಂಗ್ಸು ಗಳನ್ನು ತೋರಿಸಿ.... .'

'ಜನರನ್ನು ಮಂಗ ಮಾಡೋಕೆ ಪ್ರಯತ್ನಿಸುತ್ತೀರಿ ಅನ್ನಿ ! ಬೇರೆ ಏನು ಚುನಾವಣೆ ತಂತ್ರ ರೂಪಿಸಿದ್ದೀರಾ?'

'ನನ್ನ ಒಂದೇ ಮಂತ್ರ . ಇದು ವರೆಗೆ ನಾನು ಕೇಳಿದವರಿಗೆ ಆಟೋಗ್ರಾಫ್ ಕೊಟ್ಟಿದ್ದೀನಿ. ಮುಂದೆ ನಾನೇ ಜನರ ಬಳಿ ಹೋಗಿ, ನಾನು ನಿಮ್ಮ ಫ್ಯಾನ್ , ಆಟೋಗ್ರಾಫ್ ರೂಪದಲ್ಲಿ ಮತ ಕೊಡಿ ಪ್ಲೀಸ್ ಎಂದು ಕೇಳಿಕೊಳ್ಳುತ್ತೇನೆ.'

'ಸಿದ್ದರಾಮಯ್ಯರನ್ನು ಸೋಲಿಸುವುದು ಕಷ್ಟ ಅನಿಸೊಲ್ವೇ?'

'ಜನರಲ್ಲಿ ಕೇಳುತ್ತೇನೆ. ಸಿದ್ದರಾಮಯ್ಯ ಬೇಕೋ ? ಸಿದ್ಧಾಂತ ಬೇಕೋ? ಅಂತ '

'ಅದ್ಯಾರು ಸಿದ್ಧಾಂತ ?'

'ರೀ! ನಮ್ಮ ಪಕ್ಷ ಸಿದ್ಧಾಂತದ ಮೇಲೆ ನಿಲ್ಲಲಿದೆ!'

'ಆ ಮೇಲೆ ಷಾ ಅವರನ್ನು ಹೇಗೆ ಬಗ್ಗು ಬಡಿಯುತ್ತೀರಿ?'

'ನಾನು ಶ್.....! ಅಂದ್ರೆ ಷಾ ಬಾಲ ಬಿಚ್ಚೊಲ್ಲ ನೋಡಿ ! ಅಲ್ಲಿ ನರೇಂದ್ರ ಮೋದಿ , ಇಲ್ಲಿ ಉಪೇಂದ್ರ ಮೋಡಿ!'

'ನಿಮ್ಮ ಪಕ್ಷ ನೂರು ದಿನ ನಡೆಯಲಿ. ಆಲ್ ದಿ ಬೆಸ್ಟ್!' ಎಂದು ನಾನು ಹೇಳಿ ಹೊರಡಬೇಕೆನ್ನುವಷ್ಟರಲ್ಲಿ ನಾನು ಈ ವರೆಗೆ ಮಾತನಾಡಿದ ವ್ಯಕ್ತಿ ಕಣ್ಣ ಮೇಲಿದ್ದ ಕೂಲಿಂಗ್ ಗ್ಲಾಸ್ ತೆಗೆದು, 'ಸಾರ್, ನೀವು ತಪ್ಪು ತಿಳಿದುಕೊಂಡಿದ್ದೀರಾ.. ನಾನು ಒರಿಜಿನಲ್ ಉಪ್ಪಿ ಅಲ್ಲ' ಅಂದ.

'ಓಹ್! ಮಿಸ್ಟರ್ ಉಪ್ಪಿ–ಟು ! ಪರವಾಗಿಲ್ಲಾರೀ ..ನೀವೂ ಚೆನ್ನಾಗಿ ಡೈಲಾಗ್ ಹೊಡೆಯುತ್ತೀರಿ ! ಐ ಲೈಕ್ ಇಟ್, ಐ ಲೈಕ್ ಇಟ್!' ಎಂದು ಹೇಳಿ ನಾನು ಅಲ್ಲಿಂದ ಜಾಗ ಖಾಲಿ ಮಾಡುವ ಮೊದಲು, ದಾರಿಯಲ್ಲಿ ಹೋಗುತ್ತಿದ್ದ ಯುವಕನೊಬ್ಬನಿಗೆ ಉಪೇಂದ್ರ ಅಲ್ಲಿ ಬಂದಿರುವ ವಿಷಯ ಹೇಳಿದೆ.







